


### ಹಿತ್ತಲ ಗಿಡವೇ ಮದ್ದು

ಜಿ.ವಿ. ಗಣೇಶಯ್ಯ ಅವರ ‘ವೈದ್ಯರನ್ನು ದೂರವಿಡಿ’ ಲೇಖನ ಆಪ್ತವೆನಿಸಿತು. ಸಣ್ಣ ಪುಟ್ಟ ಕಾಯಿಲೆ ನೆಗಡಿ, ಕೆಮ್ಮು ಗಳಿಗೆಲ್ಲಾ ನೂರಾರು ರೂಪಾಯಿ ಬಿಲ್ ಮಾಡುವ ಡಾಕ್ಟರ್ ಗಳಿದ್ದಾರೆ! ‘ಹಿತ್ತಲ ಗಿಡದ ಮದ್ದು’ ಅನೇಕ ರೀತಿಯ ರೋಗಗಳಿಗೆ ಸಂಜೀವಿನಿ ಎಂದರೆ ತಪ್ಪಾಗಲಾರದು.

–ರಾಜಶೇಖರಗೌಡ, ಕೊಟ್ಟೂರು/ ಶಂ.ನ.ಶೇಷಗಿರಿ, ಜಯಪುರ/ ರಾಜೇಂದ್ರಕುಮಾರ್, ದೊಡ್ಡಬಳ್ಳಾಪುರ

### ರೋಗಗಳನ್ನು ದೂರವಿಡಿ, ವೈದ್ಯರನ್ನಲ್ಲ!

ಜಿ.ವಿ. ಗಣೇಶಯ್ಯನವರು ಲೇಖನದುದ್ದಕ್ಕೂ ಆಲೋಪತಿ ವೈದ್ಯಪದ್ಧತಿಯನ್ನು ಹಗುರವಾಗಿ ಕಂಡು, ನಕಲೀ ವೈದ್ಯರನ್ನು ಪ್ರೋತ್ಸಾಹಿಸಿರುವಂತೆ ಕಾಣುತ್ತದೆ. ರೋಗದ ಮೂಲವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಚಿಕಿತ್ಸೆ ನೀಡುವ ಬದಲು ರೋಗದ ಲಕ್ಷಣಗಳಿಗೆ ಮಾತ್ರ ಚಿಕಿತ್ಸೆ ನೀಡಿದರೆ ಸಾಕು ಎನ್ನುವುದು ತಪ್ಪು.

ಹುಟ್ಟುವಾಗಲೇ ಬರುವ ಸೀಳುತುಟಿ, ಹೃದಯದ ನ್ಯೂನತೆಗಳು, ಹರ್ನಿಯಾ– ಇವುಗಳಿಗೆ ಆಯುರ್ವೇದ ಪದ್ದತಿಯಿಂದ ಚಿಕಿತ್ಸೆ ಸಾಧ್ಯವಿಲ್ಲ. ಉತ್ತಮ ಜೀವನ ಅನುಸರಿಸುವುದು ಒಳ್ಳೆಯದು. ಆದರೆ ಅನಾರೋಗ್ಯಕ್ಕೆ ಚಿಕಿತ್ಸೆ ಅತ್ಯಗತ್ಯ. ಯಾವ ಪದ್ಧತಿ ಎಂಬುದು ಮುಖ್ಯವಲ್ಲ.

–ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಅಂತಃಕರಣ ತಟ್ಟಿದ ನೆನಪು

‘ಸುಂದರೇಶ್ ನೆನಪುಗಳು’ ಅಂತಃಕರಣವನ್ನು ಮುಟ್ಟುತ್ತದೆ. ಶೋಭಾ ಅವರ ಬರಹ ಸರಳ, ನೇರ.

–ಎಸ್. ಚನ್ನಪ್ಪ, ಮೈಸೂರು/ ಕೆ.ಎಸ್. ರಘುನಾಥರಾವ್, ಫಲ್ಗುಣಿ/ ಎಂ.ಜಿ. ರಾಜಶೇಖರ ಶೆಟ್ಟಿ, ದೊಡ್ಡಬಳ್ಳಾಪುರ/ರೇಷ್ಮಾ ಎ.ಎಸ್., ಬಾಳೆಹೊನ್ನೂರು

### ವಿನಯಶೀಲ ವಿದ್ಯಾರ್ಥಿ

ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಸುಂದರೇಶ್ ನನ್ನ ವಿನಯಶೀಲ ವಿದ್ಯಾರ್ಥಿಯಾಗಿದ್ದರು. ಅವರ ಹೋರಾಟದ ಬಗ್ಗೆ ಅಲ್ಪ ಸ್ವಲ್ಪ ತಿಳಿದಿದ್ದರೂ, ಲೇಖನ ಓದಿದ ಮೇಲೆ ‘ಇಷ್ಟೆಲ್ಲ ಮಾಡಿದರೇ?’ ಎಂದು ಅಚ್ಚರಿಯಾಯಿತು.

– ಸಿಪಿಕೆ, ಮೈಸೂರು

### ನಿರ್ಗತಿಕರ ತಾಯಿ

ದ.ರಾ. ಪುರೋಹಿತರ ‘ನಿರ್ಗತಿಕರ ತಾಯಿ ಇವ್ವಾನ್ ಲೋಮ್ಯಾಕ್ಸ್’ ಕುರಿತ ಲೇಖನ ಮೆಚ್ಚುಗೆಯಾಯ್ತು.

–ಗೀತಾಂಜಲಿ ಗೌಡ, ಕೊಟ್ಟೂರು/ ಎಚ್. ಕಾಶೀನಾಥರೆಡ್ಡಿ, ಹುಮನಾಬಾದ್

### ಸಕಾಲಿಕ

ಯು.ಪಿ. ಪುರಾಣಿಕರ ‘ನೀವು ಆರೋಗ್ಯ ವಿಮೆ ಮಾಡಿಸಿಲ್ವಾ!’ ಸಕಾಲಿಕ ಲೇಖನ.

–ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

### ಸೊಗಸಾದ ಕಥೆ

ಬಿ.ಎಲ್. ವೇಣುರವರು ‘ಮನ್ವಂತರ’ ಸೊಗಸಾದ ಕಥೆಯ ಮೂಲಕ ಜಾತಿ, ಮತಗಳ ಅಂತರಕ್ಕಿಂತ, ಹೃದಯಾಂತರಾಳದಲ್ಲಿನ ಪ್ರೀತಿ, ವಿಶ್ವಾಸಗಳೇ ನಿಜವಾದ ಮಾನವತೆ ಎಂದು ಸಾರಿದ್ದಾರೆ.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ/ ಎಚ್.ಆನಂದಕುಮಾರ್, ಚಿತ್ರದುರ್ಗ

### ಪುರುಷರ ಗತಿ ಏನು?

ವಂಡರ್ ಪುಟದಲ್ಲಿ ‘ಐರನ್ ಲೇಡಿ’ಯ ಫೋಟೋ ನೋಡಿ ಮೈ ಝುಂ ಎಂದಿತು! ಭಾರತೀಯ ನಾರಿಯರೆಲ್ಲಾ ಐರನೆಯರಾದರೆ? ಗಂಡಂದಿರ ಗತಿ? ಪರಮಾತ್ಮನೇ ಕಾಪಾಡಬೇಕು!

–ಪ್ರಹ್ಲಾದ ರಾಜು ಬುರ್ಲಿ, ದಾವಣಗೆರೆ

*ಐರನ್ ಲೇಡಿಯ ಬಾಡಿ*
*ದುರುದುರು ಎಲ್ಲರೂ ನೋಡಿ*
*ದಂಗಾಗಿ ಹೋದರು ಬಿಡಿ*
*ಅಬ್ಬಬ್ಬ ಓ ಹೆಣ್ಣೆ!*
*ನಿನ್ನಂಥವಳೊಬ್ಬಳು ಇದ್ದರೆ ಗಲ್ಲಿಗೆ*
*ಬೀದಿ ಕಾಮಣ್ಣರೆಲ್ಲಾ ಸೀದಾ ಗಲ್ಲಿಗೆ!*

–ಮುಗುಳುವಳ್ಳಿ ಸದಾಶಿವ, ಚಿಕ್ಕಮಗಳೂರು

### *ಗಾಂಧಿ ಶ್ರೀಮಂತರಿದ್ದರು*

ಸರಳ ಜೀವನದ ಗಾಂಧೀಜಿ ಬೆಳ್ಳಿಲೋಟ ಬಳಸುತ್ತಿದ್ದರೆ? ಎಂದು ವಸಂತಿ, ದಿವಾಕರ ಪ್ರಶ್ನಿಸಿದ್ದಾರೆ. ಆದರೆ ಸ್ವಾತಂತ್ರ್ಯ ಚಳವಳಿಗೆ ಧುಮುಕುವ ಮುನ್ನ ಗಾಂಧಿ ಕುಟುಂಬದ್ದು ಆಗರ್ಭ ಶ್ರೀಮಂತಿಕೆಯ ಬದುಕು. ಆ ಕಾಲದಲ್ಲೇ ಗಾಂಧೀಜಿಯವರಿಗೆ ವಿದೇಶದಲ್ಲಿ ಅಧ್ಯಯನ ನಡೆಸುವುದಕ್ಕೆ ಸಾಧ್ಯವಾಗಿದ್ದು ಇದಕ್ಕೆ ದೊಡ್ಡ ಸಾಕ್ಷಿ. ಈಗಲೂ ಗಾಂಧೀಜಿಯವರ ಸಂಬಂಧಿಕರ ಮನೆಗಳಲ್ಲಿ ಬೆಳ್ಳಿ ಲೋಟ, ತಟ್ಟೆ ಬಳಕೆ ಸಾಮಾನ್ಯ ಎನ್ನುವ ಸಂಗತಿ ಸುಮಿತ್ರಾ ಗಾಂಧಿ ಕುಲಕರ್ಣಿ ಅವರ ಮೂಲಕವೇ ನನಗೂ ತಿಳಿದಿದ್ದು.

– ರಾಚಪ್ಪ ಹೋಳೂರು, ಬೆಂಗಳೂರು

### ಕಥಾ ಸಂಕಲನಕ್ಕೆ ಆಹ್ವಾನ

ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನವು, ಜಿಲ್ಲಾ ಯುವ ಬರಹಗಾರರ ಬಳಗ, ಮಂಡ್ಯ ಇವರ ಸಹಯೋಗದೊಡನೆ ವಾರ್ಷಿಕ ಕಥಾ ಸಂಕಲನ ಪ್ರಶಸ್ತಿಗೆ 2009ನೇ ಸಾಲಿನಲ್ಲಿ ಪ್ರಕಟವಾದ ಕಥಾ ಸಂಕಲನಗಳನ್ನು ಆಹ್ವಾನಿಸಿದೆ. ಮೊದಲ ಮುದ್ರಣದ ಕಥಾ ಸಂಕಲನಗಳ ಪ್ರಕಾಶಕರು ಅಥವಾ ಲೇಖಕರು ಎರಡು ಪ್ರತಿಗಳನ್ನು ಅಧ್ಯಕ್ಷರು, ಡಾ. ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ ನಂ. 90, 16ನೇ ಅಡ್ಡರಸ್ತೆ. 4ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಇವರಿಗೆ ಮಾರ್ಚ್ 15ರ ಒಳಗಾಗಿ ಕಳುಹಿಸಿಕೊಡಲು ಅಧ್ಯಕ್ಷ ಸತೀಶ್ ಜವರೇಗೌಡ ಕೋರಿದ್ದಾರೆ. ಮಾಹಿತಿಗೆ 080–26583645 ಸಂಪರ್ಕಿಸಿ.

### ಮಾಸ್ತಿ ಕಾದಂಬರಿ ಪುರಸ್ಕಾರ

ಮಾಸ್ತಿ ಕಾದಂಬರಿ ಪುರಸ್ಕಾರಕ್ಕೆ ಕಾದಂಬರಿಗಳನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್ ಆಹ್ವಾನಿಸಿದೆ. ಮೊದಲ ಪ್ರಶಸ್ತಿ 30 ಸಾವಿರ ರೂ. ಎರಡನೇ ಪ್ರಶಸ್ತಿ 25 ಸಾವಿರ ರೂ. ಹಾಗೂ ಮೂರನೇ ಪ್ರಶಸ್ತಿಗೆ 20 ಸಾವಿರ ರೂ. ನೀಡಲಾಗುವುದು.

ಮುದ್ರಿತ ಅಷ್ಟದಳ ಕ್ರೌನ್ 1/8 ಆಕಾರದ ಸುಮಾರು 350 ರಿಂದ 400 ಪುಟಗಳವರೆಗೆ ಕಾದಂಬರಿಯ ಗರಿಷ್ಠ ಮಿತಿ ಇರಬೇಕು. ಸಾಮಾಜಿಕ, ಐತಿಹಾಸಿಕ, ಜಾನಪದ, ಪ್ರಾದೇಶಿಕ ಹಿನ್ನೆಲೆವುಳ್ಳದ್ದಾಗಿರಬಹುದು. ಐತಿಹಾಸಿಕ, ಜಾನಪದ, ಪ್ರಾದೇಶಿಕ ಕಾದಂಬರಿಯಾದರೆ ಅವಕ್ಕೆ ತಕ್ಕ ಸ್ಪಷ್ಟ ಆಧಾರವನ್ನು ನೀಡಬೇಕು. ಸ್ಪರ್ಧೆಗೆ ಕಳುಹಿಸಿದ ಕೃತಿ ತಮ್ಮ ಸ್ವಂತದ್ದು ಎಂಬ ಮುಚ್ಚಳಿಕೆ ಪತ್ರ ಬರೆದು ಕಳಿಸಬೇಕು. ಅಧ್ಯಕ್ಷರು, ಮಾಸ್ತಿ ಟ್ರಸ್ಟ್ – ಮಾಸ್ತಿ ಪ್ರಶಸ್ತಿ ಸಮಿತಿ, ಕಾದಂಬರಿ ಸ್ಪರ್ಧೆ–2010, 21 ಎಲ್ಲಪ್ಪ ಗಾರ್ಡನ್, 10ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560 003 ಈ ವಿಳಾಸಕ್ಕೆ ಏ. 30ರ ಒಳಗಾಗಿ ಕಳಿಸಿಕೊಡಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮಾವಿನಕೆರೆ ರಂಗನಾಥನ್, ಅಧ್ಯಕ್ಷರು 080–23363347 ಈ ದೂರವಾಣಿಗೆ ಸಂಪರ್ಕಿಸಬಹುದು.

ಪರೀಕ್ಷೆಯ
ದಿನಗಳು ಇಷ್ಟು ಹತ್ತಿರವಿರುವಾಗ.....
ಕೇವಲ ‘ಶಂಖಪುಷ್ಪಿ’ ಮಾತ್ರ ವ್ಯತ್ಯಾಸ ತರಬಲ್ಲದು.

‘ಶಂಖಪುಷ್ಪಿ’ ಮತ್ತು ‘ಬ್ರಾಹ್ಮಿ’ಯು ಅತ್ಯುತ್ತಮ ಬುದ್ಧಿವರ್ಧಕಗಳೆಂದು ಪ್ರಮಾಣಿತಗೊಂಡ ಸಸ್ಯೌಷಧಿಗಳಾಗಿವೆ.




- ಪರೀಕ್ಷೆಯ ದಿನಗಳು ಸಮೀಪಿಸುತ್ತಿದ್ದಂತೆಯೇ ವಿದ್ಯಾರ್ಥಿಗಳಲ್ಲಿ ಕಲಿಕೆಯ ಒತ್ತಡ ಮತ್ತು ಮಾನಸಿಕ ದುಗುಡ ಹೆಚ್ಚುತ್ತದೆ. ಅದೃಷ್ಟವಶಾತ್ ‘ಶಂಖಪುಷ್ಪಿ’ಯಿಂದ ಇವೆಲ್ಲವನ್ನೂ ನಿಭಾಯಿಸಬಹುದು.
- ದೀರ್ಘಕಾಲದ ಸಂಶೋಧನೆಯ ನಂತರ ಬ್ರಾಹ್ಮಿಯ ಸಂಯೋಜನೆಯೊಂದಿಗೆ ತಯಾರಿಸಲ್ಪಟ್ಟ ಏಕಮಾತ್ರ ಬುದ್ಧಿವರ್ಧಕ ಸಸ್ಯೌಷಧಿ ‘ಶಂಖಪುಷ್ಪಿ’.
- ‘ಬ್ರಾಹ್ಮಿ’ಯು ಸೆಂಟ್ರಲ್ ಡ್ರಗ್ ರಿಸರ್ಚ್ ಇನ್‌ಸ್ಟಿಟ್ಯೂಟ್ (CDRI)ನಿಂದ ಅತ್ಯುತ್ತಮ ಜ್ಞಾಪಕ ಶಕ್ತಿವರ್ಧಕ ಸಸ್ಯವೆಂದು ಪ್ರಮಾಣಿತಗೊಂಡಿದೆ.
- ಪರೀಕ್ಷೆಗೆ ಕೇವಲ ಕೆಲವೇ ವಾರಗಳು ಉಳಿದಿರುವಾಗ, ನಿಮ್ಮ ಮಗು ಕೂಡ ಇದರಿಂದ ಪ್ರಯೋಜನ ಹೊಂದಬಹುದು......

ಬೈದ್ಯನಾಥ್
ಶಂಖಪುಷ್ಪಿ
ಉತ್ತಮ ಫಲಿತಾಂಶಕ್ಕಾಗಿ